3. ಪಶುವೈದ್ಯ ಸಹಾಯಕರು	-	1
4. 'ಡಿ' ದರ್ಜೆ ನೌಕರರು	-	2
ಒಟ್ಟು	-	5
ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ:	:	2
1. ಪಶುವೈದ್ಯಾಧಿಕಾರಿ	-	1
2. 'ಡಿ' ದರ್ಜೆ ನೌಕರರು	-	1
ಒಟ್ಟು	-	2

ಇ) ಬಂದಿದೆ. ಪಶುವೈದ್ಯಾಧಿಕಾರಿಯವರನ್ನು ಇತ್ತೀಚೆಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿದ್ದು ವಸತಿ ಸೌಕರ್ಯ ಸಿಕ್ಕದೇ ಇರುವುದರಿಂದ ಕೇಂದ್ರ ಸ್ಥಾನದಲ್ಲಿ ಇರುವುದಿಲ್ಲ.

ಈ) ಕೇಂದ್ರ ಸ್ಥಾನದಲ್ಲಿ ಇರುವಂತೆ ಸದರಿ ಅಧಿಕಾರಿಗೆ ನಿರ್ದೇಶಿಸಲಾಗಿದೆ.

ರಾಜ್ಯದಲ್ಲಿ ಉರ್ದು ಅಕಾಡೆಮಿಗಳಿಗೆ ಹೆಚ್ಚಿನ ಅನುದಾನ.

2923(3675)

ಶ್ರೀ ಎಂ.ಜಿ.ಮುಳೆ(ಬಸವಕಲ್ಯಾಣ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಉರ್ದು ಭಾಷೆ ಮಾತನಾಡುವ ಜನರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಇರುವುದರಿಂದ ಉರ್ದು ಅಕಾಡೆಮಿಗೆ ಕಳೆದ 3 ವರ್ಷಗಳಿಂದ ಒದಗಿಸಿರುವ ಅನುದಾನದ ಪ್ರಮಾಣವೆಷ್ಟು?

ಆ) ಉರ್ದು ಅಕಾಡೆಮಿಗೆ ಒದಗಿಸಿರುವ ಅನುದಾನದ ಪ್ರಮಾಣ ತುಂಬಾ ಕಡಿಮೆಯಾಗುವುದರಿಂದ ಉರ್ದು ಅಕಾಡೆಮಿಯ ಕಾರ್ಯಕ್ರಮಗಳು ನಡೆಸುವುದಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಈ ಅನುದಾನವನ್ನು ಹೆಚ್ಚಿಸುವ ಉದ್ದೇಶ ಸರ್ಕಾರಕ್ಕಿದೆಯೆ; ಇದ್ದರೆ ಯಾವಾಗ ಹಾಗೂ ಎಷ್ಟು ಪ್ರಮಾಣದಲ್ಲಿ ಹೆಚ್ಚಿಸಲಾಗುವುದು?

ಶ್ರೀಮತಿ ರಾಣಿಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವೆಯವರು):

ಅ)

	ಯೋಜನೆ (ರೂ. ಲಕ್ಷಗಳಲ್ಲಿ)	ಯೋಜನೇತರ (ರೂ. ಲಕ್ಷಗಳಲ್ಲಿ)
1) 1998-99	7.50	5.30
2) 1999-2000	6.50	6.30
3) 2000-2001	7.40	5.88
ಒಟ್ಟು	21.40	17.48

ಆ) ಕಡಿಮೆಯಾಗಿಲ್ಲ.

ಇ) 1) ಆಯವ್ಯಯ ಮಿತಿಯಲ್ಲಿ ವಾರ್ಷಿಕ ಅನುದಾನವನ್ನು ಎಲ್ಲಾ ಅಕಾಡೆಮಿಗಳಿಗೆ ಹಂಚಿಕೆ ಮಾಡಿ ನೀಡಲಾಗುತ್ತದೆ.

2) ಉರ್ದು ಅಕಾಡೆಮಿ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿಕೊಂಡಾಗ ಅಂತಹ ಯೋಜನೆಗಳ ಅವಶ್ಯಕತೆಯನ್ನು ಮನಗಂಡು ಹೆಚ್ಚಿನ ಅನುದಾನವನ್ನು ನೀಡಲು ಪರಿಶೀಲಿಸಲಾಗುವುದು.

ಬಸವಕಲ್ಯಾಣ ಕ್ಷೇತ್ರದ ಅರಣ್ಯಾಭಿವೃದ್ಧಿ ಕಾಮಗಾರಿ.

2924(3676)

ಶ್ರೀ ಎಂ.ಜಿ.ಮುಳೆ(ಬಸವಕಲ್ಯಾಣ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿವಿಧ ಯೋಜನೆಗಳ ಅಡಿಯಲ್ಲಿ ಬಸವ ಕಲ್ಯಾಣ ಮತ ಕ್ಷೇತ್ರದಲ್ಲಿ ಅರಣ್ಯ ಅಭಿವೃದ್ಧಿಗೆ ಕೈಗೊಂಡ ಕಾಮಗಾರಿಗಳ ಸಂಖ್ಯೆ ಎಷ್ಟು?